ಪಾಶಗಳನ್ನೆಲ್ಲ ಬಿಟ್ಟು ದೇವರನ್ನೇ ಧ್ಯಾನಿಸಿಕೊಂಡು ನಿಂತಾಗ ಮಾತ್ರ ಆ ಸಮತೋಲಿತ ಸ್ಥಿತಿಯನ್ನು ನಾನು ತಲುಪಬಹುದು. ಹಿಂದಿನ ಕಾಲದಲ್ಲಿ ಹರಿವಾಣದಲ್ಲಿ ನೀರು ತುಂಬಿ, ತಲೆಯಲ್ಲಿ ನೀರು ತುಂಬಿದ ಕಲಶವನ್ನು ಹೊತ್ತುಕೊಂಡು, ಒಂದೇ ಒಂದು ಹನಿಯೂ ವೇದಿಕೆಗೆ ಚೆಲ್ಲದಂತೆ ನೃತ್ಯ ಮಾಡುತ್ತಿದ್ದರಂತೆ. ಆ ಸಾಧನೆಯ ಬಗ್ಗೆ ಆಲೋಚಿಸುವಾಗ ಮೈ ಝುಂ ಎನಿಸುತ್ತದೆ. ನಾನು ಅಷ್ಟೊಂದು ಸಾಧನೆಯನ್ನು ಮಾಡಿಲ್ಲ. ಆದರೆ ನಾನು ಆಯ್ಕೆ ಮಾಡಿಕೊಂಡಿರುವುದು ಸಾಧನೆಯ ಹಾದಿ, ಇದನ್ನು ನಾನು ಎಷ್ಟೋ ರೀತಿಯ ಏಳುಬೀಳುಗಳ ಮೂಲಕ ಆಯ್ಕೆ ಮಾಡಿಕೊಂಡಿದ್ದೇನೆ ಎಂಬ ತೃಪ್ತಿ ನನಗೆ ಇದೆ.

**◆ ನಿಮ್ಮ ಈ ಆಯ್ಕೆಯಲ್ಲಿ ನೀವು ಕಂಡುಕೊಂಡ ವಿಚಾರಗಳನ್ನು ಹೇಗೆ ವಿವರಿಸುವಿರಿ?**

ಕಲೆಯ ಅಂತರಾಳದಲ್ಲಿ ತತ್ತ್ವಜ್ಞಾನ ಅಡಗಿರುತ್ತದೆ. ಕಲೆಯನ್ನು ಪ್ರಾಮಾಣಿಕವಾಗಿ ನಂಬಿದವನನ್ನು ಅದು ಮೇಲ್ದರ್ಜೆಗೇರಿಸುತ್ತದೆ. ಅದರ ಬಾಹ್ಯಾರ್ಥ ನೀಡುವ ಸಂದೇಶ ಒಂದು ತೆರನದ್ದಾದರೆ, ಸಾಧಕನ ಪಾಲಿಗೆ ಅದು ಅನೇಕಾರ್ಥಗಳನ್ನು ಕೊಡುತ್ತದೆ. ನಾವು ಕೈಗೆತ್ತಿಕೊಳ್ಳುವ ಕಥೆಗಳನ್ನೇ ತೆಗೆದುಕೊಳ್ಳಿ. ಅವು ನಮ್ಮ ದೈನಂದಿನ ಬದುಕಿಗೆ ಸಂಬಂಧಿಸಿರುತ್ತವೆ ಮತ್ತು ನಮ್ಮ ಆಲೋಚನೆಗಳನ್ನು ಶುದ್ಧಗೊಳಿಸುವ ಪ್ರಯತ್ನ ಮಾಡುತ್ತಿರುತ್ತವೆ. ಅಷ್ಟಪದಿಯು ಸಂಪೂರ್ಣ ಸಮರ್ಪಣೆಯನ್ನು ವಿವರಿಸಿದರೆ, 'ಭಾಮಾ ಕಲಾಪ'ದಲ್ಲಿ ರುಕ್ಮಿಣಿಯು ಸತ್ಯಭಾಮೆಯ ಕುರಿತು ಹೇಳುತ್ತಾ, ಪರಿಶುದ್ಧ ಪ್ರೀತಿ ಹೇಗಿರಬೇಕು ಎಂದು ವಿವರಿಸುತ್ತಾಳೆ. ಭಾಮೆಯೋ ನಮ್ಮ ನಿಮ್ಮಂತೆ ಸಂಪತ್ತು ಮತ್ತು ಪ್ರತಿಷ್ಠೆಯ ಸಂಕೇತವಾಗಿ ಹಟಮಾರಿಯಾಗಿರುತ್ತಾಳೆ. ಅವುಗಳನ್ನೆಲ್ಲ ಬಿಟ್ಟು ನನ್ನ ಬಳಿಗೆ ಬಾ ಎನ್ನುವ ಕೃಷ್ಣನ ಮಾತು ನಮ್ಮ ನಿಮ್ಮೆಲ್ಲರಿಗೂ ಸಂದೇಶವಲ್ಲದೆ ಮತ್ತೇನು? ನಮ್ಮ ಆಧುನಿಕ ಜೀವನಶೈಲಿಯನ್ನು ವಿಮರ್ಶೆ ಮಾಡಿಕೊಳ್ಳಲು ಮಹಾಭಾರತದಷ್ಟು ಉತ್ತಮ ಕಥೆ ಮತ್ತೊಂದಿಲ್ಲ. ಆ ಕಥೆಗಳನ್ನು ಅರ್ಥಮಾಡಿಕೊಳ್ಳಲು ಕಲೆಯಷ್ಟು ಸುಂದರ ಮಾಧ್ಯಮ ಮತ್ತೊಂದಿಲ್ಲ.

**◆ ಏಳುಬೀಳುಗಳನ್ನು ದಾಟಿ ಬಂದ ಬಗೆಯನ್ನು ಹೇಳುವಿರಾ?**

ಬದುಕಿನಲ್ಲಿ ಎದುರಾಗುವ ಕಷ್ಟಗಳನ್ನೆಲ್ಲ ನೆನಪಿಡುವುದಕ್ಕಾಗುತ್ತದೆಯೆ? ಆದರೆ ಅವಮಾನಗಳನ್ನು ಮರೆಯುವುದು ಸುಲಭವಲ್ಲ. ನಾನು ಕೂಚಿಪುಡಿ ನೃತ್ಯವನ್ನು ಆಯ್ಕೆ ಮಾಡಿಕೊಂಡಿದ್ದೇನೆ ಎಂಬ ಕಾರಣಕ್ಕೆ ನಮ್ಮ ಸಮುದಾಯದವರು ಊರಿನಲ್ಲಿ ಅಮ್ಮನಿಗೆ ಬಹಿಷ್ಕಾರ ಹಾಕಿದ್ದರು. ಕೊನೆಗೆ ನಾನು ನ್ಯಾಯಾಲಯದ ಮೊರೆಹೋಗಿ ಕೇಸು ಗೆದ್ದೆ. ನನಗೆ ಪ್ರಶಸ್ತಿಯೋ, ಗೌರವವೋ, ಹೊಗಳಿಕೆಯೋ ದೊರೆತಾಗಲೆಲ್ಲ ಅಂದಿನ ದಿನಗಳಲ್ಲಿ ಎದುರಿಸಿದ ಅವಮಾನಗಳಿಗೆ ಉತ್ತರವನ್ನು ಪಡೆದಂತೆ ಭಾಸವಾಗುತ್ತದೆ. ಕೂಚಿಪುಡಿ ಕಲಿಯಬೇಕೆಂದು ಒಬ್ಬರು ಗುರುಗಳ ಬಳಿ ಹೋದಾಗ, 'ನಿನ್ನ ಮುಖವನ್ನು ಕನ್ನಡಿಯಲ್ಲಿ ನೋಡಿದ್ದೀಯಾ... ನೃತ್ಯ ಮಾಡುವುದಕ್ಕೆ ಬೇಕಾದ ರೂಪ ನಿನ್ನಲ್ಲಿದೆ ಎಂದುಕೊಂಡಿರುವೆಯಾ...' ಎಂದು ಗದರಿಸಿ ಕಳುಹಿಸಿದ್ದರು. ಅಂದಿನ ಕಾಲದಲ್ಲಿ ಪುರುಷರೇ, ಸ್ತ್ರೀ ಪಾತ್ರಗಳನ್ನೂ ಮಾಡುತ್ತಿದ್ದುದರಿಂದ, ಕಲಾವಿದರಾದವರು, ಸ್ವಲ್ಪ ಸಪೂರ ಮತ್ತು ತಕ್ಕಮಟ್ಟಿಗಿನ ಎತ್ತರ ಹೊಂದಿದವರಾಗಬೇಕಿತ್ತು. ನನ್ನ ಹಾಗೆ ಇಷ್ಟೆತ್ತರವೂ, ಕಟ್ಟುಮಸ್ತಾದ ಶರೀರವೂ ಇದ್ದಾಗ, ಸ್ತ್ರೀ ವೇಷ ಒಪ್ಪುವುದಿಲ್ಲವಲ್ಲ. ನನ್ನ ಬಣ್ಣವೂ ಆಂಧ್ರದ ಬಿಸಿಲಿಗೆ ಬಾಡಿದ ಬಣ್ಣವಾಗಿತ್ತು. ನನ್ನ ಕಾಲುಗಳು ನೃತ್ಯಕ್ಕಾಗಿ ತುಡಿಯುತ್ತಿದ್ದರೆ, ಗುರುಗಳು ಹೀಗೆ ಹೇಳಿದರಲ್ಲಾ... ಎಂದು ಬೇಸರ ಪಟ್ಟುಕೊಂಡಿದ್ದೇನೆ.

**◆ ನಿಮ್ಮ ಕೀರ್ತಿವೃಕ್ಷವು ದಟ್ಟವಾಗಿಯೂ ವಿಶಾಲವಾಗಿಯೂ ಹರಡಿರುವಾಗ, ಅದರಡಿಯಲ್ಲಿ ಮಕ್ಕಳಿಬ್ಬರು ಯಶಸ್ಸಿಗಾಗಿ ಹೆಚ್ಚು ಪ್ರಯಾಸಪಡಬೇಕಾಯಿತೇ?**

ನನ್ನ ಮಕ್ಕಳಾದ ಯಾಮಿನಿ ಮತ್ತು ಭಾವನಾ ಇಬ್ಬರೂ ಬಾಲ್ಯದಿಂದಲೂ ನಮ್ಮ ನೃತ್ಯ ತರಗತಿಗಳಲ್ಲಿ ಓಡಾಡುತ್ತಲೇ ಬೆಳೆದರು. ಅವರು ನೃತ್ಯ ತರಗತಿಗಳಿಗೆಂದು ಪ್ರತ್ಯೇಕವಾಗಿ ಹೋಗುವ ಅವಶ್ಯಕತೆ ಹೆಚ್ಚೇನೂ ಬೀಳಲಿಲ್ಲ. ಹಾಗಾಗಿ ಔಪಚಾರಿಕ ಶಿಕ್ಷಣ ಕ್ಷೇತ್ರವನ್ನು ಪ್ರವೇಶಿಸುವಷ್ಟರಲ್ಲಿ ಅವರು ಕೂಚಿಪುಡಿಯ